KAN 102.1 Reg. No. ......................................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯು. ಪದವಿ ಪರೀಕ್ಷೆ

ಅಕ್ಟೋಬರ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

ಭಾಗ – ೧: ಕಾವ್ಯ

I. ಅ) ಒಂದು ಪ್ರಶ್ನೆಗೆ ಉತ್ತರಿಸಿ: 1X10=10

1) ದೀನ ದಲಿತರ ಪರವಾದ ನಿಲುವು ವ್ರೀಹಿನರೆದಲೆಗ ವಾಗ್ವಾದದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

2) ಸ್ವಾರ್ಥ ಮನುಷ್ಯನ ಸಹಜ ಗುಣವಾಗಿ ಹಿಂಸೆಯನ್ನು ನಿರಂತರವಾಗಿ ನಡೆಸುವ ಪರಿಯನ್ನು ಲಂಕೇಶರು ಕವನದಲ್ಲಿ ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: 1X7=7

1) ಎನ್ನ ದೇವರ ಗುಡಿ ಕವನವು ಸಾಂಪ್ರದಾಯಿಕವಾದ ದೇವರ ಕಲ್ಪನೆ, ಭಕ್ತಿಯ ಕಲ್ಪನೆಯನ್ನು ಹೇಗೆ ನಿರಾಕರಿಸುತ್ತದೆ? ವಿವೇಚಿಸಿ.

2) ದಲಿತ ವಿದ್ಯಾವಂತ ಯುವಕ ಜೀತದಿಂದ ಮುಕ್ತನಾದೆ ಎಂದು ಯೋಚಿಸುವುದು ಬರೀ ಭ್ರಮೆ ಎಂಬುದನ್ನು ಗೋವಿಂದಯ್ಯ ಕವನದಲ್ಲಿ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

ಇ) ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ. 2X3=6

1) ಕನಕದಾಸ

2) ಸುದೇಷ್ಣೆ

3) ಕಂಕಭಟ

II. ಅ) ಒಂದು ಪದ್ಯಭಾಗದ ಭಾವ ಸ್ವಾರಸ್ಯವನ್ನು ವಿವರಿಸಿ. 1X5=5

1) ಪರನಾರಿಯರ ಸಂಗ ತರಿ ಕೆಂಡದ್ಹಾಂಗ।
ಉರಿ ಕೆಣಕಿ ಅರಗು ತಾ ಕರಗಿ ಹೋದ್ಹಾಂಗ।।
ಮರುಳ ಬುದ್ಧಿಯಿಂದ ಕೆಡದಿರು ಈಗ।
ಹುರುಳಿಲ್ಲ ಪರನಾರಿಯರ ಸಂಗದೊಳಗ।।

2) ಕಿಸೆಗೆ ಹಸಿರು ನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು
ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲ್ಲಿ ತಾವು ಕೂತು
ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು
ನಮ್ಮ ಮೈಯ ತುಪ್ಪಟವರವಷ್ಟು ಬಿಡದ ಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು

ಆ) ಕೆಳಗಿನ ಸಾಲುಗಳಲ್ಲಿ ಎರಡರ ಸಂದರ್ಭ ಸೂಚಿಸಿ ವಿವರಿಸಿ. 2X3=6

1) ಸಾರಹೃದಯನು ನರೆದಲೆಗ ನಿಸ್ಸರನೀ ವ್ರಿಹಿಯೆನಲು

2) ಮನಪಿಜನ ತಾಪವು ಘನವಾಯಿತೆನಗ

3) ಹಿಂಸೆಯಲ್ಲಿ ಬಿರಿತು ಮೊಳೆಯುವ ಬೀಜ

## ಭಾಗ – ೨: ಸಣ್ಣಕತೆ/ಗದ್ಯ

**III.** ಅ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. **1X10=10**

1) ಅಸ್ಪೃಶ್ಯತೆಯಿಂದ ಹೊರಬರಲು ಮೋಚಿ ಏಕೆ ಸಿದ್ಧನಾಗಿಲ್ಲ? ಕತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.
2) ಮುಗ್ಧನಾಗಿದ್ದ ಕಣ್ಣಪ್ಪ ಕುಡುಕನಾಗಲು, ನಿಜ ಬದುಕಿಗಿಂತ ಸೆರೆಮನೆಯೆ ವಾಸಿ ಅಂದುಕೊಳ್ಳಲು ವ್ಯವಸ್ಥೆ ಹೇಗೆ ಕಾರಣವಾಗುತ್ತದೆ? ವಿವೇಚಿಸಿ.

ಆ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. **1X5=5**

1) ಅಂಗಡಿ ಪೂಜೆ ಕತೆಯು ಜಾತಿ – ಧರ್ಮವನ್ನು ಮೀರಿದ ಮಾನವ ಸಹಜ ಪ್ರೀತಿಯನ್ನು ಹೇಗೆ ಪ್ರತಿಪಾದಿಸುತ್ತದೆ?
2) ಭ್ರಷ್ಟ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಬಿತ್ತಿ ಬೆಳೆದವರು ಕಥೆಯು ಹೇಗೆ ಕಟ್ಟಿಕೊಡುತ್ತದೆ? ವಿವರಿಸಿ.

**IV.** ಅ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. **1X10=10**

1) ಜಾತಿಯ ಮಡಿಗಿಂತ ಊರಿನ ಪರಿಸರದ ನೈರ್ಮಲ್ಯದ ಅಗತ್ಯವನ್ನು ಹಳ್ಳಿಗ ಕೊಡನೆ ಸಾಕ್ರೆಟಿಸ್ ಲೇಖನದಲ್ಲಿ ಹೇಗೆ ಪ್ರತಿಪಾದಿಸಲಾಗಿದೆ? ವಿವರಿಸಿ.
2) ಪ್ರಜಾಪ್ರಭುತ್ವವು ಯಶಸ್ವಿಯಾಗಲು ಪ್ರಜೆಗಳು ವಹಿಸಬೇಕಾದ ಪಾತ್ರದ ಮಹತ್ವವನ್ನು ಅಡಿಗರು ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.

ಆ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. **1X7=7**

1) ಹಾಂಗ್‌ಕಾಂಗ್‌ನ ಪ್ರವಾಸೋಧ್ಯಮದ ಅಭಿವೃದ್ಧಿಯನ್ನು ನಾಗೇಶ ಹೆಗಡೆಯವರು ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.
3) ಮೂಲಭೂತವಾಗಿ ಮನುಷ್ಯರೆಲ್ಲರೂ ಸಮಾನರು ಎಂಬ ಆಶಯ ಸಾಕ್ರೆಟಿಸ್ ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

## ಭಾಗ – ೩: ಕ್ರಿಯಾತ್ಮಕ ಕನ್ನಡ

**V.** ಅ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. **1X6=6**

1) ಸರ್ಕಾರಿ ಪತ್ರ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.
2) ಸಂಪಾದಕರಿಗೆ ಬರೆಯುವ ಪತ್ರ ಹೇಗಿರಬೇಕು? ಉದಾಹರಣೆಯೊಂದಿಗೆ ವಿವರಿಸಿ.

ಆ) <u>ಒಂದಕ್ಕೆ</u> ಟಿಪ್ಪಣಿ ಬರೆಯಿರಿ. **1X3=3**

1) ಅರ್ಜಿಗಳು
2) ವಿಚಾರಣಾ ಪತ್ರ

**VI.** ಅ) <u>ಒಂದು</u> ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. **1X5=5**

1) ನಳಚರಿತೆಯನ್ನು ಬರೆದ ಕವಿ ಯಾರು?
2) ನಿತ್ಯೋತ್ಸವ ಕವಿಯೆಂದು ಯಾರನ್ನು ಕರೆಯುತ್ತೇವೆ?
3) ಮುಸ್ಸಂಜೆಯ ಕಥಾ ಪ್ರಸಂಗ ಇದು ಯಾರ ಕಾದಂಬರಿ?
4) 'ಇರುವುದೊಂದೆ ಭೂಮಿ' ಇದರ ಲೇಖಕರು ಯಾರು?
5) ಅಡಕ ಎಂದರೇನು?

**********

**KAN 102.1** **Reg. No. .................................**

# ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ
## ಅಕ್ಟೋಬರ್ 2013
## ಕನ್ನಡ ಭಾಷಾ ಪತ್ರಿಕೆ – I

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

### ಕಾವ್ಯ ಭಾಗ

**I.** ಅ) ಈ ಪದ್ಯ ಭಾಗಗಳಲ್ಲಿ ಒಂದರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿ: **1x5=5**

1) ಪರನಾರಿಯರ ಸಂಗ ತರಿ ಕೆಂಡದ್ಹಂಗ।
ಉರಿ ಕೆಣಕಿ ಅರಗು ತಾ ಕರಗಿ ಹೋದ್ಹಂಗ॥
ಮರುಳ ಬುದ್ಧಿಯಿಂದ ಕೆಡದಿರು ಈಗ।
ಹುರುಳಿಲ್ಲ ಪರನಾರಿಯರ ಸಂಗದೊಳಗ

2) ಅವ್ವ ಹಾಸಿಗೆ ಹಿಡಿದಿದ್ದಾಗ
ನನ್ನ ದುರುದುರು ನೋಡಿ ಕೊಟ್ಟ ಸಾಲಕ್ಕೆ
ಗೌಡ ಜೀತಕ್ಕೆ ಬರಬೇಕೆಂದು
ಹಟ ಹಿಡಿದಿದ್ದಾರೆ
ನನ್ನ ತಮ್ಮನಿಗೇಳು
ಅವರ ಮನೆಗೋಗಲು ರೆಡಿಯಾಗೆಂದು
ನಾನೂ ಬರುತ್ತೇನೆ

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಿಸಿ: **2x3=6**

1) ಎಳ್ಳು ದರ್ಬೆಗೆ ತೆತ್ತಿಗನು ನೀನಾದೆ
2) ಮಹಾತ್ಮ ಹೊರಟು ಹೋದರು
3) ಮತಕೆ ಮನ್ನಣೆಯಿಲ್ಲ ಮತಿಗೇ ಮಹತ್ವಿಕೆಯು

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ: **1x10=10**

1) ಸಾಮಾಜಿಕ ಸಮಾನತೆಯ ಆಶಯವು ವ್ರೀಹಿ ನರೆದಲೆಗ ವಾಗ್ವಾದ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ? ವಿವೇಚಿಸಿ.
2) ಶ್ರೀಸಾಮಾನ್ಯನ ಅಸಹಾಯಕ ಸ್ಥಿತಿಯು ಕೆ.ಎಸ್.ನಿಸಾರ್ ಅಹಮದ್‌ರ ಕವನದಲ್ಲಿ ಹೇಗೆ ಅನಾವರಣಗೊಂಡಿದೆ? ವಿಶ್ಲೇಷಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿರಿ: **1x7=7**

1) ಗಾಂಧೀಜಿಯವರ ವಿಚಾರಗಳನ್ನು ಕವಿ ಲಂಕೇಶ್ ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.
2) ಸಾಂಪ್ರದಾಯಿಕವಾದ ದೇವರಿಗಿಂತ ಭಿನ್ನವಾದ ದೇವರ ಕಲ್ಪನೆಯನ್ನು ಅಮೃತ ಸೋಮೇಶ್ವರರು ಹೇಗೆ ಕಟ್ಟಿಕೊಟ್ಟಿದ್ದಾರೆ? ವಿಶ್ಲೇಷಿಸಿ.

### ಗದ್ಯಭಾಗ

**II.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: **1x10=10**

1) ಪ್ರಜಾಪ್ರಭುತ್ವದ ಮೂಲಬಲ ಜನದ ಮತ. ಜನರು ಈ ಶಕ್ತಿಯನ್ನು ಹೇಗೆ ಬಳಸಿಕೊಳ್ಳಬೇಕೆಂದು ಅಡಿಗರು ಅಭಿಪ್ರಾಯಪಟ್ಟಿದ್ದಾರೆ? ವಿವೇಚಿಸಿ.

2) ಮುಕ್ತಮಾರುಕಟ್ಟೆಯ ಹಿನ್ನೆಲೆಯಲ್ಲಿ ಹಾಂಗ್‌ಕಾಂಗ್ ನಗರದ ಆಧುನಿಕ ಅಭಿವೃದ್ಧಿಯನ್ನು ಲೇಖಕರು ಹೇಗೆ ವಿಶ್ಲೇಷಿಸಿದ್ದಾರೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರ ಬರೆಯಿರಿ: **1x7=7**

1) ಹಳ್ಳಿಗರೊಡನೆ ಸಾಕ್ರಟಿಸ್ ಪ್ರಬಂಧದಲ್ಲಿ ನಮ್ಮ ಹಳ್ಳಿಗಳಲ್ಲಿರುವ ಹಲವು ಅನಿಷ್ಟ ಪದ್ಧತಿಗಳ ಬಗ್ಗೆ ಹೇಗೆ ಬೆಳಕು ಚೆಲ್ಲಲಾಗಿದೆ? ವಿವೇಚಿಸಿ.

2) ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯು ರಾಜಕಾರಣಿಗಳನ್ನು ಸರ್ವಾಧಿಕಾರಿಗಳನ್ನಾಗಿಸುತ್ತಿದೆಯೇ? ವಿಶ್ಲೇಷಿಸಿ.

## ಕಥೆ

**III.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: **1x10=10**

1) ಅಸ್ಪೃಶ್ಯತೆಯ ಕರಾಳಮುಖದ ಚಿತ್ರಣವು ಮೋಚಿ ಕಥೆಯಲ್ಲಿ ಹೇಗೆ ಕಂಡುಬರುತ್ತದೆ? ವಿವೇಚಿಸಿ.

2) ಬಿತ್ತಿ ಬೆಳೆದವರು ಕಥೆಯಲ್ಲಿ ರಾಜಕಾರಣಿಗಳು ಮತ್ತು ವ್ಯಾಪಾರಿಗಳ ನಡುವಿನ ಅನೈತಿಕ ಸಂಬಂಧವನ್ನು ಹೇಗೆ ವಿಶ್ಲೇಷಿಸಲಾಗಿದೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ: **1x5=5**

1) ಕಣ್ಣಪ್ಪನ ಮುಗ್ಧ ಮನಸ್ಸಿನ ಒಳಲೋಕವನ್ನು ಕಥೆಯಲ್ಲಿ ಹೇಗೆ ತೆರೆದಿಡಲಾಗಿದೆ? ವಿವೇಚಿಸಿ.

2) ಅಂಗಡಿ ಪೂಜೆ ಕಥೆಯಲ್ಲಿ ಮಾನವ ಸಹಜ ಪ್ರೀತಿಗೆ ಹೇಗೆ ಆಧ್ಯತೆ ನೀಡಲಾಗಿದೆ? ವಿವರಿಸಿ.

## ಕ್ರಿಯಾತ್ಮಕ ಕನ್ನಡ

**IV.** ಅ) ಒಂದು ಪ್ರಶ್ನೆಗೆ ಉತ್ತರಿಸಿ: **1x6=6**

1) ಅರೆ ಸರ್ಕಾರಿ ಪತ್ರ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

2) ವೃತ್ತ ಪತ್ರಿಕೆಯಲ್ಲಿ ಸಂಪಾದಕರಿಗೆ ಬರೆಯುವ ಪತ್ರಗಳಿಗಿರುವ ಮಹತ್ತ್ವವೇನು? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: **1x3=3**

1) ವಿಚಾರಣಾ ಪತ್ರ ಎಂದರೇನು? ವಿವರಿಸಿ.

2) ಅರ್ಜಿಗಳನ್ನು ಹೇಗೆ ತಯಾರಿಸಬೇಕು? ವಿವರಿಸಿ.

**V.** ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ: **2x3=6**

1) ನಾರದ

2) ಸುದೇಷ್ಣೆ

3) ಸರ್ವಜ್ಞ

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ: **5x1=5**

1) ಜಂಭಾರಿ ಎಂದರೆ ಯಾರು?

2) ನಿತ್ಯೋತ್ಸವ ಗೀತೆಗಳ ಮೂಲಕ ಜನರ ಮನಸ್ಸಿನಲ್ಲಿ ನೆಲೆ ನಿಂತ ಕವಿ ಯಾರು?

3) ಸಾರಾ ಅಬೂಬಕರ್ ಇವರ ಮೊದಲ ಕಾದಂಬರಿ ಯಾವುದು?

4) ಲಂಕೇಶರು ನಿರ್ದೇಶಿಸಿದ ಯಾವುದಾದರೊಂದು ಸಿನಿಮಾದ ಹೆಸರನ್ನು ಬರೆಯಿರಿ.

5) 'ನಡೆದು ಬಂದ ದಾರಿ' ಇದು ಯಾರ ಕವನ ಸಂಕಲನ?

**********

**KAN 102.1**

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

**I (ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 10=10

(1) ಭತ್ತ ಮತ್ತು ರಾಗಿ ಇವುಗಳ ವಾಗ್ವಾದವನ್ನು ಕನಕದಾಸರು ಯಾವ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ? ವಿವರಿಸಿ.

(2) ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶ್ರೀಸಾಮಾನ್ಯನ ಅಸಹಾಯಕ ಸ್ಥಿತಿಯನ್ನು ನಿಸಾರ್ ಅಹಮದ್ ಹೇಗೆ ಚಿತ್ರಿಸಿದ್ದಾರೆ? ವಿಶ್ಲೇಷಿಸಿ.

**(ಆ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 7=7

(1) ಪ್ರೀತಿಯೇ ಪ್ರಧಾನವಾದ ದೇವರ ಕಲ್ಪನೆಯನ್ನು 'ಎನ್ನ ದೇವರ ಗುಡಿ' ಕವನ ಹೇಗೆ ಕಟ್ಟಿಕೊಡುತ್ತದೆ? ವಿವೇಚಿಸಿ.

(2) 'ಅಪ್ಪನಿಗೆ ಒಂದು ಪತ್ರ' ಕವನದ ಆಶಯವೇನು? ವಿವರಿಸಿ.

**ಇ) ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ.** 2 × 3=6

(1) ಸೈರಂಧ್ರಿ

(2) ಪಿ. ಲಂಕೇಶ್

(3) ಧೌಮ್ಯ ಮುನಿ

**II (ಅ) ಒಂದು ಪದ್ಯಭಾಗದ ಭಾವ ಸ್ವಾರಸ್ಯವನ್ನು ವಿವರಿಸಿ.** 1 × 5=5

(1) ಕಾಮಿನಿಯರ ಕಂಡ ಮನಸು ಎಳಸುವುದು ।
ಪಾಮರನನು ಬಾಧೆ ಗುರಿಯ ಮಾಡುವದು ॥
ತಮ್ಮ ತಿಳಿಯದು ನಿನಗೆ ಮುಂದೇನಾಗುವುದು ।
ಕಾಮನ ಗುಣ ನಿನಗೆ ಪರಿಣಾಮಗುಡದು ॥

(2) ಮುಗಿಲು ಅಂಧಕ, ಹೆಳವನಾಗಬೇಕಾದಲ್ಲಿ,
ಹತ್ತು ತಲೆಗಳು ಬಿದ್ದು ಹುತ್ತ ಕೊನರುವ ಇಲ್ಲಿ
ಬೆಂಕಿ ಸುಡುವಲ್ಲಿ, ನೀರು ಮುಳುಗಿಸುವಲ್ಲಿ ಭೂಮಿ ಬಿರಿವಲ್ಲಿ
ನೀನು ಮತ್ತು ಮಾಸ್ತರು ಸತ್ತಾಗ,
ಮಣ್ಣೂ ಕಸುವಾಯಿತೆ ಅಥವಾ ಬಯಲು ಬೆಳಕಾಯಿತೆ, ನೋಡುತ್ತ
ಶುರು ಮಾಡುವೆವು ಮತ್ತೊಮ್ಮೆ ಪೋಲಿರಾಗ

**ಆ) ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭವನ್ನು ಸೂಚಿಸಿ ವಿವರಿಸಿ.** 2 × 3=6

(1) ಎಳ್ಳು ದರ್ಭೆಗೆ ತೆತ್ತಿಗನು ನೀನಾದೆ

(2) ಕರಿಕೇಸರಿಯ ಬಲಕೆ ಸರಿ ಎನಿಸುವದೆ

(3) ಪ್ರೀತಿಯ ರಥೋತ್ಸವಕೆ ಸರ್ವರೂ ಸೇರುವರು
ಇಲ್ಲಿ ಉಣಸಿಗೆ ಪಂಕ್ತಿಭೇದವಿಲ್ಲ

**III (ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 10=10

(1) ಅಸ್ಪೃಶ್ಯತೆ ಆಚರಣೆಯ ಕೇಡನ್ನು 'ಮೋಚಿ' ಕತೆಯು ಹೇಗೆ ಚಿತ್ರಿಸುತ್ತದೆ? ವಿವೇಚಿಸಿ.

(2) ತರಕಾರಿ ಮಾರುವ ಕಣ್ಣಪ್ಪನ ಮುಗ್ಧ ಮನಸ್ಸಿನ ಒಳಲೋಕವನ್ನು ಲಂಕೇಶರು ಹೇಗೆ ಅನಾವರಣಗೊಳಿಸಿದ್ದಾರೆ? ವಿವರಿಸಿ.

**ಆ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 5=5

(1) ಜಾತಿ–ಧರ್ಮದ ಕಟ್ಟಳೆಗಳು 'ಅಂಗಡಿಪೂಜೆ' ಕತೆಯಲ್ಲಿ ಹೇಗೆ ಚಿತ್ರಿತಗೊಂಡಿವೆ? ವಿವೇಚಿಸಿ.

(2) ಜನಸೇವೆಯಾಗಬೇಕಾಗಿದ್ದ ರಾಜಕಾರಣ ಈಗ ಹಣ ಮಾಡುವ ದಂಧೆಯಾಗಿರುವ ಪರಿಯನ್ನು ಸಾರಾ ಅಬೂಬಕರ್ ಹೇಗೆ ಕತೆಯಲ್ಲಿ ಚಿತ್ರಿಸಿದ್ದಾರೆ? ವಿಶ್ಲೇಷಿಸಿ.

**IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 10=10

(1) ಸಮಾನತೆಯ ಆಶಯವು ಹಳ್ಳಿಗರೊಡನೆ ಸಾಕ್ರೆಟಿಸ್ ಪ್ರಬಂಧದಲ್ಲಿ ಹೇಗೆ ಪ್ರತಿಪಾದಿತವಾಗಿದೆ? ವಿವೇಚಿಸಿ.

(2) ಹಾಂಗ್‌ಕಾಂಗ್‌ನ ವ್ಯಾಪಾರ ಮತ್ತು ಪ್ರವಾಸೋದ್ಯಮವನ್ನು ವಿಭಿನ್ನವಾಗಿ ಲೇಖಕರು ಹೇಗೆ ಪರಿಚಯಿಸಿದ್ದಾರೆ? ವಿವರಿಸಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 1 × 5=5

(1) ಪ್ರಜೆಗಳು ರಾಜಕೀಯವಾಗಿ ಪ್ರಜ್ಞಾವಂತರಾಗಬೇಕಾದ ಅನಿವಾರ್ಯತೆಯನ್ನು ಅಡಿಗರು ಹೇಗೆ ಪ್ರತಿಪಾದಿಸಿದ್ದಾರೆ? ವಿವೇಚಿಸಿ.

(2) ಅಸ್ಪೃಶ್ಯತೆಯ ಆಚರಣೆ ತಪ್ಪು ಎಂಬುದನ್ನು ಹಳ್ಳಿಗರೊಡನೆ ಸಾಕ್ರೆಟಿಸ್ ಲೇಖನವು ಹೇಗೆ ಸೂಚಿಸುತ್ತದೆ? ವಿಶ್ಲೇಷಿಸಿ.

**V ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 1 × 6=6

(1) ಔಪಚಾರಿಕ ಪತ್ರ ಎಂದರೇನು? ಅದರ ವಿವಿಧ ಅಂಗಗಳನ್ನು ಪರಿಚಯಿಸಿ.

(2) ಅರ್ಜಿ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

**ಆ) ಒಂದಕ್ಕೆ ಟಿಪ್ಪಣಿ ಬರೆಯಿರಿ** 1 × 3=3

(1) ಅರೆ ಅಧಿಕೃತ ಪತ್ರ

(2) ಸಂಪಾದಕರಿಗೆ ಪತ್ರ

**VI ಅ) ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ** 1 × 5=5

(1) ಕನಕದಾಸರ ಅಂಕಿತನಾಮವೇನು?

(2) ಪಾಂಡವರು ಅಜ್ಞಾತವಾಸವನ್ನು ಎಲ್ಲಿ ಕಳೆದರು?

(3) ಸೆವೆಂಥ್ ಫ್ಲೀಟ್ ಎಂದರೇನು?

(4) ಸಾರಾ ಅಬೂಬಕರ್‌ರವರ ಯಾವುದಾದರೊಂದು ಕೃತಿಯನ್ನು ಹೆಸರಿಸಿ.

(5) ಅರೆಸರ್ಕಾರಿ ಪತ್ರಕ್ಕೆ ಇಂಗ್ಲಿಷ್‌ನಲ್ಲಿ ಏನೆಂದು ಕರೆಯುತ್ತಾರೆ?

*****

(13)

KAN 103.1

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I **(ಅ) ಒಂದು ಪದ್ಯದ ಭಾವಾರ್ಥ ಬರೆಯಿರಿ** 5

(1) ಗುರುವಿನ ನೆತ್ತರಂ ಕುಡಿವೆನಪ್ಪೊಡವಂ ದ್ವಿಜವಂಶಜಂ ನಿಜಾ
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆ ಪೀರ್ದನೆಯ್ದಿ ಭೀ
ಷ್ಮರ ಬಿಸುನೆತ್ತರಂ ಕುಡಿವೊಡಿನ್ನುಮೊಳಂ ಕುರುರಾಜ ನಿನ್ನ ನೆ
ತ್ತರ ಸವಿ ನೋೞ್ಪಿನಂ ಬಯಸಿ ಬಾತಪೆನೆಂದುದದೊಂದು ಪುಲ್ಮರುಳ್ ॥

(2) ಮಾರನಾಕಾರದ ನೃಪಾಲಕ
ಕ್ರೂರರೂಪಾದನು ಪುರಾಕೃತ
ಮೀರಲಾರಳವೆಂದು ನುಡಿದನು ತನ್ನ ಮನದೊಳಗೆ
ತೋರಮಾಣಿಕವೆಂದು ಪಿಡಿದರೆ
ಭೂರಿಕೆಂಡವಿದಾಯ್ತು ಶಿವಶಿವ
ಕ್ರೂರ ಜಂತುಗಳೊಡನೆ ಸಖಿತನ ಫಲಿಸಿತೆನಗೆಂದ

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ನಮ್ಮನೀ ಕಣಿವೆಯಲಿ ಕಂಡರೆ ಚಿಮ್ಮಿಹರಿವುದು ನೆತ್ತರು

(2) ಮಳೆಹೊಯ್ದು ತೆರನಾಯ್ತು ಮಂಥರೆಯ ಮರುಧರೆಗೆ

(3) ಹೊಸಬಾಳಿನ ಹೊಸಸಮತೆಯ ಸಮರಸವನು ಸಮೆವೆವು

**ಇ) ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಮಿತಿಮೀರಿದ ಛಲ ಸರ್ವನಾಶಕ್ಕೆ ಕಾರಣ ಎಂಬುದನ್ನು ರನ್ನನ ಕಾವ್ಯಭಾಗ 'ಗುರುವಚನಮಲಂಘನೀಯಂ' ಹೇಗೆ ವಿವರಿಸುತ್ತದೆ?

(2) ಅವಮಾನ, ನಿಂದೆ ಇತ್ಯಾದಿಗಳು ವ್ಯಕ್ತಿಯಲ್ಲಿ ಸೇಡಿನ ಕಿಡಿಯನ್ನು ಎಬ್ಬಿಸುತ್ತವೆ ಎಂಬುದು 'ಮೊಲದಕೋಡಾದುದು ಸೊಗಂ' ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

**ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 7

(1) ನಳಮಹಾರಾಜನಿಗೆ ಬಂದೊದಗಿದ ವಿಪತ್ತುಗಳು 'ದಳ್ಳುರಿಗಾನಲಾಪುದೆ ತರುನಿಕರ' ಕಾವ್ಯಭಾಗದಲ್ಲಿ ಹೇಗೆ ವರ್ಣಿತವಾಗಿವೆ?

(2) ಪ್ರೇಮಿಗಳಿಬ್ಬರ ಬದುಕಿನ ದುರಂತ 'ಕಾರಿಹೆಗ್ಗಡೆಯ ಮಗಳು' ಕವನದಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

II **ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಪ್ರಕೃತಿಗೂ ಮನುಷ್ಯನಿಗೂ ಇರುವ ನಿಕಟಸಂಬಂಧವು ನಾ'ಡಿಸೋಜಾರ ಲೇಖನದಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿ.

(2) ಪಟ್ರೇಸಿಯಾಳು ಸ್ವಾವಲಂಬನೆಯ ಬದುಕಿನಿಂದ ಸಾಧನೆಯ ಶಿಖರವೇರಿದ್ದನ್ನು 'ಕಷ್ಟಬಂದಾಗ ಆಕೆ ಬಾಗಲಿಲ್ಲ' ಪ್ರಬಂಧವು ಹೇಗೆ ವಿವರಿಸುತ್ತದೆ?

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಅಭಿವೃದ್ಧಿಯ ಹೆಸರಿನಲ್ಲಿ 'ಬುಲ್‌ಡೋಜರ್ ಸಂಸ್ಕೃತಿ' ನಮಗೆ ಪ್ರಿಯವಾಗಲು ಕಾರಣವೇನು? ವಿವರಿಸಿ.

(2) 'ಅಸ್ಪೃಶ್ಯತೆ ಅಂದರೆ' ಲೇಖನದಲ್ಲಿನ ದೇವನೂರು ಮಹಾದೇವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

**III ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **10**

(1) 'ಹೇಮಕೂಟದಿಂದ ಬಂದ ಮೇಲೆ' ಕಥೆಯಲ್ಲಿ ಶಕುಂತಲೆಯ ಪಾತ್ರವು ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

(2) ನವದಂಪತಿಯ ಬದುಕನ್ನೇ ಕಸಿದುಕೊಂಡ ದಾರುಣ ಚಿತ್ರಣವನ್ನು 'ನಾಗರಬೆತ್ತ' ಕಥೆಯು ಹೇಗೆ ವಿವರಿಸುತ್ತದೆ?

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಕಿವುಡನ ಬಡತನದ ದುರಂತ ಸ್ಥಿತಿಯನ್ನು ಕುಂ.ವೀ. ಹೇಗೆ ತಮ್ಮ ಕಥೆಯಲ್ಲಿ ಚಿತ್ರಿಸಿದ್ದಾರೆ? ವಿವರಿಸಿ.

(2) 'ಹೊಸಹುಟ್ಟು' – ಕಥೆಯ ಆಶಯವೇನು? ವಿವರಿಸಿ.

**IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **6**

(1) ಆದೇಶಪತ್ರ ಎಂದರೇನು? ಉದಾಹರಣೆ ಸಹಿತ ವಿವರಿಸಿರಿ.

(2) ಆಕ್ಷೇಪಣಾ ಪತ್ರ ಎಂದರೇನು? ಉದಾಹರಣೆ ಸಹಿತ ವಿವರಿಸಿರಿ.

**V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **6**

(1) ರನ್ನ

(2) ದೇವನೂರು ಮಹಾದೇವ

(3) ಕನಕದಾಸ

**ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ** **6**

(1) ಕನಕದಾಸರ ಅಂಕಿತನಾಮ ಯಾವುದು?

(2) ಬಿ.ಎಂ. ಶ್ರೀ ಯವರ ಪೂರ್ಣ ಹೆಸರೇನು?

(3) 'ಇರುವುದೊಂದೆ ಭೂಮಿ' ಯಾರ ಕೃತಿ?

(4) 'ನಾಗರಬೆತ್ತ' ಯಾರು ಬರೆದ ಕತೆ?

(5) ಕುವೆಂಪು ಅವರ ಹುಟ್ಟೂರು ಯಾವುದು?

(6) 'ಒಡಲಾಳ' ಯಾರು ಬರೆದ ಕಾದಂಬರಿ?

*****

KAN 102.1

14|10 (2)

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2015**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

**I (ಅ) ಈ ಪದ್ಯಭಾಗಗಳಲ್ಲಿ ಒಂದರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿ.** $1 \times 5 = 5$

(1) ಸತ್ಯಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೆನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯನೀನಹೆ ಹೆಣದ ಬಾಯಿಗೆ
ತುತ್ತು ನೀನದೆ ನಿನ್ನ ಜನ್ಮ ನಿರರ್ಥಕರವೆಂದ

(2) ಹೊಟ್ಟೆಬಟ್ಟೆಗೊಗ್ಗದಂಥ ಕಲೆಯ ಕರ್ಮಕಿಳಿಯದಂತೆ
ತಲೆಬೆಲೆಯ ಸುಧಾರಿಸಿ
ಬಿಳಿಕಪ್ಪಿನ ದ್ವಂದ್ವಗಳಿಗೆ ಮಾಡಿಸಿ ಸಮಜಾಯಿಷಿ,
ನಮ್ಮ ಮೆದುಳು ಶುದ್ಧಿಯಾಗಿ, ಬುದ್ಧಿ ನಿರ್ಬುದ್ಧಿಯಾಗಿ,
ಕೆಂಬಣ್ಣವನೊಂದೆ ಪೂಸಿ
ಅದರ ಬಾಲ ಇದು ಇದರ ಬಾಲ ಅದು ಮೂಸಿ
ನಡೆವ ನಮ್ಮೊಳೆಲ್ಲಿ ಬಿರುಕು?

**ಆ) ಎರಡರ ಸಾಲುಗಳಿಗೆ ಸಂದರ್ಭ ಸಹಿತ ವಿವರಿಸಿ:** $2 \times 3 = 6$

(1) ಪರನಾರಿಯರ ಸಂಗ ತರಿ ಕೆಂಡದ್ಹಂಗ

(2) ಪ್ರೀತಿಯೆಂಬುದೆ ಇಲ್ಲಿ ನೀತಿ ಸರ್ವೋದಯವೆ ಸೂತ್ರ

(3) ಅವ್ವನಿಗೂ ಹೇಳು ಅಳಬೇಡೆಂದು ಇನ್ನೇನೋ ಇಷ್ಟರಲ್ಲೇ ಬಂದು ಬಿಡುತ್ತಾನೆಂದು

**ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ:** $1 \times 10 = 10$

(1) ಕೀಚಕ ವಧೆಯ ಪ್ರಸಂಗವು ಪಾಂಡವರ ಅಜ್ಞಾತವಾಸ ಕಾವ್ಯ ಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

(2) ಗಾಂಧೀಜಿ ಮತ್ತು ಮೇಷ್ಟರ ಸಾವು ಕವಿಯಲ್ಲಿ ಹೇಗೆ ಸ್ವಂತ ಆಲೋಚನೆಯನ್ನು ಹುಟ್ಟುಹಾಕುತ್ತದೆ? ವಿವೇಚಿಸಿ.

**ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** $1 \times 7 = 7$

(1) ಜಾತೀಯತೆಯ ಮತ್ತು ಸಾಮಾಜಿಕ ಅಸಮಾನತೆಯ ವಿಡಂಬನೆಯು ಕನಕದಾಸರ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.

(2) ಪ್ರೀತಿಯ ಪ್ರಧಾನವಾದ ದೇವರ ಕಲ್ಪನೆಯನ್ನು 'ಎನ್ನ ದೇವರ ಗುಡಿ' ಕವನದಲ್ಲಿ ಹೇಗೆ ಕಟ್ಟಿಕೊಡಲಾಗಿದೆ? ವಿವೇಚಿಸಿ.

**II ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** $1 \times 10 = 10$

(1) ಮೂಲಭೂತವಾಗಿ ಮನುಷ್ಯರೆಲ್ಲರೂ ಸಮಾನರು ಎಂಬ ಆಶಯವೂ ಹಳ್ಳಿಗರೊದನೆ ಸಾಕ್ರಟಿಸ್ ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.

(2) ದೇಶದ ಜನರು ರಾಜಕೀಯವಾಗಿ ಪ್ರಜ್ಞಾವಂತರಾಗಬೇಕೆಂವುದನ್ನು ಗೋಪಾಲಕೃಷ್ಣ ಅಡಿಗರು ಹೇಗೆ ಪ್ರತಿಪಾದಿಸಿದ್ದಾರೆ? ವಿವೇಚಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ $1 \times 7 = 7$

(1) ನಮ್ಮ ಹಳ್ಳಿಯ ಪರಿಸರವನ್ನು ಸ್ವಚ್ಛವಾಗಿ ಉಳಿಸಿಕೊಳ್ಳಬೇಕೆಂಬುದನ್ನು ಸಾಕ್ರೆಟಿಸ್ ಪ್ರಬಂಧದಲ್ಲಿ ಹೇಗೆ ಸೂಚಿಸಲಾಗಿದೆ? ವಿವರಿಸಿ.

(2) ಭೋಗಪ್ರಧಾನವಾದ ಆಧುನಿಕ ಹಾಂಗಾಂಗನ್ನು ಲೇಖಕರು ಹೇಗೆ ಪರಿಚಯಿಸಿದ್ದಾರೆ? ವಿವೇಚಿಸಿ.

III ಅ) ಒಂದು ಪ್ರಶ್ನೆಗೆ ಉತ್ತರಿಸಿರಿ $1 \times 10 = 10$

(1) ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆಯು ಆಳವಾಗಿ ಬೇರೂರಿರುವುದನ್ನು ಮೋಚಿ ಕಥನದಲ್ಲಿ ಹೇಗೆ ಚಿತ್ರಿಸಲಾಗಿದೆ? ವಿಶ್ಲೇಷಿಸಿ.

(2) ಕಣ್ಣಪ್ಪನು, ತನ್ನ ನಿಜಬದುಕಿಗಿಂತ ಸೆರೆಮನೆಯೆ ವಾಸಿ ಎಂದುಕೊಳ್ಳಲು ಕಾರಣವಾದ ಹಿನ್ನೆಲೆಯೇನು? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ $1 \times 5 = 5$

(1) ಜಾತಿ-ಧರ್ಮಗಳನ್ನು ಮೀರಿದ ಮಾನವ ಸಹಜ ಪ್ರೀತಿಯೆ ಮುಖ್ಯವಾಗಬೇಕೆಂಬ ಆಶಯವು ಅಂಗದೆ ಪೂಜೆ ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.

(2) ರಾಜಕಾರಣಿಗಳು ಮತ್ತು ವ್ಯಾಪಾರಿಗಳ ನಡುವಿನ ಸಂಬಂಧವನ್ನು ಬಿತ್ತಿಬೆಳೆದವರು ಕಥೆಯಲ್ಲಿ ಹೇಗೆ ಚಿತ್ರಿಸಲಾದೆ. ವಿವರಿಸಿ.

IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ $1 \times 6 = 6$

(1) ಔಪಚಾರಿಕ ಪತ್ರ ಎಂದರೇನು? ಅದರ ಪ್ರಧಾನ ಅಂಗಗಳಾವುವು? ಪರಿಚಯಿಸಿ.

(2) ಸಂಪಾದಕರಿಗೆ ಬರೆಯುವ ಪತ್ರ ಹೇಗಿರಬೇಕು? ಉದಾಹರಣೆಯೊಂದಿಗೆ ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ $1 \times 3 = 3$

(1) ಅರೆ ಅಧಿಕೃತ ಪತ್ರ ಎಂದರೇನು? ಪರಿಚಯಿಸಿ.

(2) ಅರ್ಜಿಗಳನ್ನು ಹೇಗೆ ತಯಾರಿಸಬೇಕು? ವಿವರಿಸಿ.

V ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. $2 \times 3 = 6$

(1) ರಾಮಧಾನ್ಯ

(2) ಸೈರಂಧ್ರಿ

(3) ಪೇಜರ್

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ 6

(1) ಕನಕದಾಸರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.

(2) ಪಾಂಡವರು ಅಜ್ಞಾತವಾಸವನ್ನು ಎಲ್ಲಿ ಕಳೆದರು?

(3) ಭಾರತೀಪ್ರಿಯ ಇದು ಯಾರ ಕಾವ್ಯನಾಮ?

(4) ಸಾಕ್ರಟಿಸ್ ಯಾವ ದೇಶದ ತತ್ತ್ವಜ್ಞಾನಿ?

(5) 'ಇರುವುದೊಂದೆ ಭೂಮಿ' ಕೃತಿಯನ್ನು ಬರೆದವರು ಯಾರು?

*****

KAN 103.1

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2015**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I (ಅ) **ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ಅರಗಿನ ಮಾಡದೊಳ್ ವಿಷದ ಲಡ್ಡುಗೆಯೊಳ್ ಕೊಲಲೊಡ್ಡಿ ಬದ್ಧ ಮ
ತ್ಸರದೊಳೆ ವೈರಮಂ ಪದೆದು ಭೀಮನನಿಂತಿನಿತರ್ಕೆ ತಂದ ನೀಂ
ಮರುಳೆಯೊ ಭೂತಕೋಟಿವೆರಸಾಹವರಂಗದೊಳಾಡುತಿರ್ಪ ತಾಂ
ಮರುಳನೊ ನೋಟ್ಟಿಮಿರ್ವರ ಮರುಳ್ತನಮಂ ಫಣಿರಾಜಕೇತನಾ ॥

(2) ಜಾತಿ ಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ
ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ;
ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಲಿಗೆ,
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ;
ಕೂಡಿಸಿರಿದೆ ಕೊರಲುಗಳನು ಹೊಸಬಾಳಿನ ಹಾಡಿಗೆ;

ಆ) **ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) 'ತೋರ ಮಾಣಿಕವೆಂದು ಪಿಡಿದರೆ ಭೂರಿಕೆಂಡವಿದಾಯ್ತು'

(2) 'ಮುಳಿದ ಮುಗಿಲ ತಡೆಯಬಲ್ಲೆ, ಮುಳಿದ ತಂದೆಯ ತಡೆಯೆನು'

(3) 'ಮನ್ನಣೆ ಕುರೂಪತೆಗೆ ತಾನೆಲ್ಲಿ?'

ಇ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) 'ಗುರುವಚನಮಲಂಘನೀಯಂ' ಕಾವ್ಯಭಾಗದಲ್ಲಿ ರನ್ನನು ಚಿತ್ರಿಸಿರುವ ದುರ್ಯೋಧನನ ಪಾತ್ರವನ್ನು ವಿಶ್ಲೇಷಿಸಿರಿ.

(2) 'ದೈವವನ್ನು ನೆನೆಯುವ ಭಕ್ತರಿಗೆ ಭಯವಿಲ್ಲ' ಎಂಬ ತತ್ವದ ಹಿನ್ನೆಲೆಯಲ್ಲಿ 'ದಳ್ಳುರಿಗಾನಲಾಪುದೆ ತರುನಿಕರ?' – ಕಾವ್ಯಭಾಗವನ್ನು ವಿವೇಚಿಸಿರಿ.

ಈ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 7

(1) 'ಮೊಲದ ಕೋಡಾದುದು ಸೊಗಂ' ಕಾವ್ಯಭಾಗದಲ್ಲಿ ಮಂಥರೆಯ ಪಾತ್ರವನ್ನು ಕುವೆಂಪು ಚಿತ್ರಿಸಿದ ಬಗೆಯನ್ನು ವಿವರಿಸಿರಿ.

(2) ಬದುಕಿನಲ್ಲಿ ಬರುವ ಕಷ್ಟಗಳನ್ನು ಎದುರಿಸುವ ಛಲ ಮನುಷ್ಯನಿಗೆ ಇರಬೇಕು ಎನ್ನುವುದು ಶ್ರೀಪಾದರಾಯರ ಕೀರ್ತನೆಯಲ್ಲಿ ಹೇಗೆ ಮೂಡಿಬಂದಿದೆ?

II ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) ಪ್ರಕೃತಿಯನ್ನು ವಿಕೃತಿಯನ್ನಾಗಿಸುವ ಅಭಿವೃದ್ಧಿಯ ಜಪವನ್ನು 'ಬುಲ್‌ಡೋಜರ್ ಸಂಸ್ಕೃತಿ' ಪ್ರಬಂಧ ಹೇಗೆ ವಿಡಂಬಿಸುತ್ತದೆ?

(2) 'ಕಷ್ಟಬಂದಾಗ ಆಕೆ ಬಾಗಲಿಲ್ಲ' ಪ್ರಬಂಧವು ಪಟ್ರೇಸಿಯಾಳ ಸಾಧನೆಯ ಬದುಕನ್ನು ಹೇಗೆ ಪರಿಚಯಿಸುತ್ತದೆ?

16/10 (42)

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) ಜಗತ್ತಿನಾದ್ಯಂತದ ಅಸ್ಪೃಶ್ಯರು ಅನುಭವಿಸುತ್ತಿರುವ ನೋವನ್ನು 'ಅಸ್ಪೃಶ್ಯತೆ ಎಂದರೆ' ಪ್ರಬಂಧವು ಹೇಗೆ ವಿವರಿಸುತ್ತದೆ?

(2) 'ಪ್ರಕೃತಿಯೊಂದಿಗೆ ಅನುಸಂಧಾನ' ಪ್ರಬಂಧದ ಆಶಯವನ್ನು ವಿವರಿಸಿರಿ.

III ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 10

(1) 'ಕಿವುಡ ನಾಯಿಯಾದ ಪ್ರಸಂಗ' ಕತೆಯಲ್ಲಿ ಚಿತ್ರಣಗೊಂಡಿರುವ ಬಡತನದ ದಾರುಣತೆಯನ್ನು ವಿವರಿಸಿ.

(2) ಶಕುಂತಲೆ ಮರಳಿ ಕಣ್ವರ ಆಶ್ರಮಕ್ಕೆ ಬರುವ ಚಿತ್ರಣ 'ಹೇಮಕೂಟದಿಂದ ಬಂದ ಮೇಲೆ' ಕತೆಯಲ್ಲಿ ಹೇಗೆ ಮೂಡಿಬಂದಿದೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 7

(1) 'ನಾಗರಬೆತ್ತ' ಕತೆ ವಿವರಿಸುವ ದುರಂತವೇನು?

(2) 'ಹೊಸಹುಟ್ಟು' ಕತೆಯ ಆಶಯವೇನು? ವಿವರಿಸಿ.

IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 6

(1) ವ್ಯವಹಾರ ಪತ್ರದ ವಿವಿಧ ಅಂಗಗಳನ್ನು ಉದಾಹರಣೆ ಸಹಿತ ವಿವರಿಸಿರಿ.

(2) ಆಕ್ಷೇಪಣಾ ಪತ್ರ ಎಂದರೇನು? ಉದಾಹರಣೆ ಸಹಿತ ವಿವರಿಸಿರಿ.

V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 6

(1) ಕನಕದಾಸ

(2) ಕುವೆಂಪು

(3) ನಾಗೇಶ್ ಹೆಗಡೆ

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ 6

(1) ರನ್ನಕವಿಯ ಹುಟ್ಟೂರು ಯಾವುದು?

(2) ಬಿ.ಎಂ.ಶ್ರೀಯವರ ಕಾವ್ಯನಾಮ ಯಾವುದು?

(3) ಶ್ರೀಪಾದರಾಯರ ಕೀರ್ತನೆಗಳ ಅಂಕಿತನಾಮ ಯಾವುದು?

(4) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಯಾರ ಕೃತಿ?

(5) 'ಶ್ರೀನಿವಾಸ' ಯಾರ ಕಾವ್ಯನಾಮ?

(6) ನಾ.ಡಿಸೋಜಾರವರ ಪೂರ್ಣ ಹೆಸರೇನು?

*****

KAN 103.1

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2016**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

**I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ, ಸ್ವಾರಸ್ಯವನ್ನು ವಿವರಿಸಿ** **5X1=5**

(1) ಶೋಕಂ ಮಿಗೆ ಫಣಿರಾಜಪ
ತಾಕಂ ವಿಗಳಿತ ವಿವೇಕನವಿರಳ ಬಾಷ್ಪೋ
ದ್ರೇಕಂ ಹಾ ದುಶ್ಶಾಸನ
ಹಾ ಕರ್ಣಾ ಎನುತುಮಂತೆ ಮೂರ್ಛೆಗೆ ಸಂದಂ

(2) ಪ್ರಳಯಕಾಲದಿ ಸುಡುವ ವಡಬಾ
ನಳನೊ ಎನಲಾ ವನವ ಸುಡುತಲಿ
ಸುಳಿಸುಳಿಯುತಾಹಾರಗೊಳುತಿರಲಲ್ಲಿ ದನಿಯಾಯ್ತು
ಸಿಲುಕಿದೆನು ಪಾವಕನೊಳಕಟಕಟ
ಅಳಿವೆ ಹಾ ನೃಪಕುಲಶಿರೋಮಣಿ
ಒಲಿದು ಬಿಡಿಸೈ ಸುಕೃತ ನಿನಗಹುದೆಂದುದಾ ನಿನದ

**ಆ) ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** **3X2=6**

(1) 'ಮನ್ನಣೆ ಕುರೂಪತೆಗೆ ತಾನೆಲ್ಲಿ'

(2) 'ಪ್ರೇಮಸಿದ್ಧಿಗಾಗಿ ನೋನುತಿರುವ ಸತ್ಯಕಾಮರು!'

(3) 'ಕುರುರಾಜನೆ ನಿನ್ನ ನೆತ್ತರ ಸವಿನೋಟ್ಟಿನಂ ಬಯಸಿ ಬಾತಪೆನ್'

**ಇ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) ತನ್ನವರನ್ನು ಕಳೆದುಕೊಂಡ ದುರ್ಯೋಧನನ ದುಃಖವನ್ನು ರನ್ನ ಕವಿ ಚಿತ್ರಿಸಿದ ಬಗೆಯನ್ನು ವಿವರಿಸಿ.

(2) ನಳನಿಗೆ ಒದಗಿದ ಸಂಕಷ್ಟಗಳ ಸರಮಾಲೆಯ ಚಿತ್ರಣವನ್ನು ಮಾಡಿಕೊಡಿ.

**ಈ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) ಹರಿದಾಸರ ಕೀರ್ತನೆಗಳಲ್ಲಿ ಕಂಡು ಬರುವ ಸಾಮಾಜಿಕ ಕಳಕಳಿಯೇನು? ಪರಿಚಯಿಸಿ.

(2) ಪ್ರಭುತ್ವದ ಅಟ್ಟಹಾಸಕ್ಕೆ ಪ್ರೇಮಿಗಳ ಜೀವ ಹೇಗೆ ಬಲಿಯಾಯಿತು ಎಂಬುದನ್ನು 'ಕಾರಿಹೆಗ್ಗಡೆಯ ಮಗಳು' ಕವನದ ಆಧಾರದಿಂದ ಚರ್ಚಿಸಿ.

**II ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) ದೇವನೂರು ಮಹಾದೇವರ ಅಭಿಪ್ರಾಯದಲ್ಲಿ ಅಸ್ಪೃಶ್ಯತೆ ಎಂದರೇನು? ವಿವರಿಸಿ.

(2) 'ಮನುಷ್ಯನಿಗೆ ನಿಸರ್ಗವಿಲ್ಲದೆ ಬದುಕಿಲ್ಲ, ಆತನ ಬದುಕಿನ ಮೂಲ ನೆಲೆಯೇ ನಿಸರ್ಗ' – ಈ ಮಾತನ್ನು ಪ್ರಕೃತಿಯೊಂದಿಗೆ ಅನುಸಂಧಾನ ಪ್ರಬಂಧದ ಹಿನ್ನೆಲೆಯಲ್ಲಿ ಚರ್ಚಿಸಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) 'ಬುಲ್‌ಡೋಜರ್ ಸಂಸ್ಕೃತಿ' ಪ್ರಬಂಧದ ಆಶಯವೇನು? ಪರಿಚಯಿಸಿ.

(2) ಪೆಟ್ರಿಶಿಯಾಳ ಸ್ವಾವಲಂಬಿ ಬದುಕಿನ ಯಶೋಗಾಥೆಯನ್ನು ನಿರೂಪಿಸಿ.

III ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ದೀರ್ಘ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) ಶಕುಂತಲೆಯು ಕಣ್ವರ ಆಶ್ರಮಕ್ಕೆ ಹೋಗುವ ಆತುರ, ಸನ್ನಿವೇಶವನ್ನು ನಿರೂಪಿಸಿ.

(2) 'ನಾಗರಬೆತ್ತ ಕತೆ'ಯ ನಾಗರ ಬೆತ್ತದ ಹಿನ್ನೆಲೆಯೇನು? ವಿವರಿಸಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) 'ಕಿವುಡ ನಾಯಿಯಾದ ಪ್ರಸಂಗ' ಕತೆಯಲ್ಲಿ ಪ್ರಕಟವಾದ ಬಡವನ ಹಸಿವಿನ ಚಿತ್ರಣವೇನು?

(2) 'ಹೊಸಹುಟ್ಟು ಕತೆ'ಯ ಬೌದ್ಧಿಕ, ಮಾನಸಿಕ ಹುಟ್ಟನ್ನು ಪರಿಚಯಿಸಿ.

IV ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **6X1=6**

(1) 'ವ್ಯವಹಾರ ಪತ್ರ' ಎಂದರೆನು? ಪತ್ರದ ವಿವಿಧ ಅಂಗಗಳನ್ನು ಪರಿಚಯಿಸಿ.

(2) 'ಆದೇಶ ಪತ್ರ' ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

V ಅ) **ಕೆಳಗಿನ ಪ್ರಶ್ನೆಗಳಲ್ಲಿ ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **3x2=6**

(1) ರನ್ನ

(2) ಕನಕದಾಸ

(3) ಬಿ.ಎಂ. ಶ್ರೀ.

ಆ) **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ಪದದಲ್ಲಿ ಉತ್ತರಿಸಿರಿ** **6X1=6**

(1) 'ಸಾಹಸಭೀಮ ವಿಜಯ' ಕಾವ್ಯಕ್ಕೆ ಇರುವ ಇನ್ನೊಂದು ಹೆಸರೇನು?

(2) ಬಿ.ಎಂ. ಶ್ರೀಯವರ ಪೂರ್ಣ ಹೆಸರನ್ನು ಬರೆಯಿರಿ.

(3) 'ಶ್ರೀನಿವಾಸ' ಎಂಬುದು ಯಾರ ಕಾವ್ಯನಾಮ?

(4) ಶ್ರೀಪಾದರಾಯರ ಕೀರ್ತನೆಗಳ ಅಂಕಿತನಾಮ ಯಾವುದು?

(5) ನಳಮಹಾರಾಜನಿಗೆ ಕಚ್ಚಿದ ಉರಗಪತಿಯ ಹೆಸರೇನು?

(6) 'ಹೊಸಹುಟ್ಟು' ಕಥೆಯ ಲೇಖಕರು ಯಾರು?

*****